## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 27(72) |
| 2) | ಮಾನ್ಯ ಸದಸ್ಯರ ಹೆಸರು | **ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| 3) | ಉತ್ತರಿಸಬೇಕಾದ ದಿನಾಂಕ | **12-09-2022** |
| 4) | ಉತ್ತರಿಸುವವರು | **ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು** |

| ಪ್ರಶ್ನೆ | ಉತ್ತರ |
|---|---|
| (ಅ) ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಯುವಕರಿಗೆ ಹೊಸ ಸಂಸ್ಥೆಗಳನ್ನು ಪ್ರಾರಂಭಿಸಲು ಯುವ ಉದ್ಯಮಿಗಳನ್ನು ಪ್ರೋತ್ಸಾಹಿಸಲು ರೂಪುಗೊಂಡಿರುವ ಕೌಶಲ್ಯ ಕರ್ನಾಟಕ ಯೋಜನೆಯ ಉದ್ದೇಶಗಳೇನು; (ವಿವರ ನೀಡುವುದು) | **<u>ಕೌಶಲ್ಯ ಮಿಷನ್</u>**<br>ರಾಜ್ಯದಾದ್ಯಂತ ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು ಒಳಗೊಂಡಂತೆ ವಿವಿಧ ಸರ್ಕಾರಿ/ಖಾಸಗಿ ತರಬೇತಿ ಸಂಸ್ಥೆಗಳ ಮುಖಾಂತರ ಉಚಿತ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಮತ್ತು ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ ಜಾರಿಗೊಳಿಸಲಾಗಿದೆ.<br>ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಆಸಕ್ತ ಯುವಕ/ಯುವತಿಯರಿಗೆ ಸಣ್ಣ ಹಾಗೂ ಸೂಕ್ಷ್ಮ ಉದ್ಯಮಗಳಲ್ಲಿ ತೊಡಗಲು ಪ್ರೇರೆಪಣೆ ಮುಖಾಂತರ ಅವರುಗಳು ಉದ್ಯಮಶೀಲತೆಯತ್ತ ಒಲವು ತೋರಿಸುವಂತೆ ಸೂಕ್ತ ಮಾರ್ಗದರ್ಶನ ನೀಡುವುದು ಅಥವಾ ಬೆಂಬಲ ಸೇವೆಯನ್ನು ನೀಡುವ ಸಲುವಾಗಿ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದಿಂದ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ಧಾರವಾಡ ಸಂಸ್ಥೆಗೆ ಉದ್ಯಮಶೀಲತಾ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ರೂ.80.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಅಲ್ಲದೇ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ತರಬೇತಿ ಪಡೆದ ಅಭ್ಯರ್ಥಿಗಳಿಗೂ ಸಹ ಸಿಡಾಕ್ ಸಂಸ್ಥೆಯ ಮುಖಾಂತರ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.<br>**<u>ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (NULM)</u>**<br>ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಡೇ-ಎನ್‌ಯುಎಲ್ಎಂ ಅಭಿಯಾನದ ಉದ್ದೇಶಗಳು ಈ ಕೆಳಕಂಡಂತಿರುತ್ತವೆ.<br>➢ ನಗರದ ಬಡಜನರನ್ನು ಬಡತನ ರೇಖೆಯಿಂದ ಮೇಲೆ ತರುವುದು.<br>➢ ನಗರ ಪ್ರದೇಶದ ಮಹಿಳಾ ಸ್ವ-ಸಹಾಯ ಸಂಘ, ನಗರ/ಪ್ರದೇಶ ಮಟ್ಟದ ಒಕ್ಕೂಟಗಳ ರಚನೆ ಮತ್ತು ಸದಸ್ಯರ ಸಬಲೀಕರಣ.<br>➢ ನಗರದ ನಿರುದ್ಯೋಗ ಯುವಕ ಯುವತಿಯರಿಗೆ ಉಚಿತವಾಗಿ ಉದ್ಯೋಗಾಧರಿತ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ನೀಡುವುದು.<br>➢ ನಗರ ಪ್ರದೇಶದಲ್ಲಿನ ಬಡವರಿಗೆ ವೈಯಕ್ತಿಕ ಮತ್ತು ಗುಂಪು ಕಿರು ಉದ್ದಿಮೆಯನ್ನು ಸ್ಥಾಪಿಸಲು ಬ್ಯಾಂಕುಗಳಿಂದ ಸಾಲ ಮತ್ತು ಬಡ್ಡಿ ಸಹಾಯಧನವನ್ನು ಒದಗಿಸುವುದು.<br>➢ ನಗರ ಪ್ರದೇಶದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ವಿತರಣೆ ಹಾಗೂ ಇತರೆ ಸಾಮಾಜಿಕ ಭದ್ರತಾ ಯೋಜನೆಗಳೊಂದಿಗೆ ಸಂಪರ್ಕ ಕಲ್ಪಿಸುವುದು.<br>➢ ನಗರ ಪ್ರದೇಶದ ವಸತಿ ರಹಿತರಿಗೆ ತಾತ್ಕಾಲಿಕವಾಗಿ ತಂಗುದಾಣವನ್ನು ಒದಗಿಸುವುದು. |

(ಆ) ಕೌಶಲ್ಯ ಕರ್ನಾಟಕ ಯೋಜನೆಯಡಿ ಕಳೆದ 2ವರ್ಷಗಳಲ್ಲಿ ರೂಪಿಸಿರುವ ಕಾರ್ಯಕ್ರಮಗಳು ಯಾವುವು; ಇದಕ್ಕಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನವೇಷ್ಟು; ಈ ಕಾರ್ಯಕ್ರಮಗಳ ಪ್ರಯೋಜನ ಪಡೆದಿರುವ ಫಲಾನುಭವಿಗಳೇಷ್ಟು;
(ವಿವರ ನೀಡುವುದು)

**ಕೌಶಲ್ಯಾಭಿವೃದ್ಧಿ ನಿಗಮ**

| ಕ್ರಮ ಸಂಖ್ಯೆ | ಆರ್ಥಿಕ ವರ್ಷ | ಯೋಜನೆ | ಬಿಡುಗಡೆ ಮಾಡಿರುವ ಅನುದಾನ (ರೂ.ಲಕ್ಷಗಳಲ್ಲಿ) | ಪ್ರಯೋಜನ ಪಡೆದಿರುವ ಫಲಾನಭವಿಗಳ ಸಂಖ್ಯೆ |
|---|---|---|---|---|
| 1 | 2020-21 | ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ | 7614.54 | 25049 |
| | | ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆ | 783.72 | 9181 |
| 2 | 2021-22 | ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ | 8514.55 | 43487 |
| | | ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆ | 827.89 | 11408 |

ಮೇಲ್ಕಂಡ ಅನುದಾನದಲ್ಲಿ ಆಡಳಿತಾತ್ಮಕ ವೆಚ್ಚವನ್ನು ಒಳಗೊಂಡು ತರಬೇತಿ ಯೋಜನೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
(ಇದಲ್ಲದೇ ರೂಪಿಸಲಾದ ಇತರೆ ಕಾರ್ಯಕ್ರಮಗಳ ವಿವರ: **ಅನುಬಂಧ-1**ರಲ್ಲಿ ವಿವರಿಸಿದೆ.)

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ ಮತ್ತು ಕೌಶಲ್ಯಾಭಿವೃದ್ಧಿ ಕೇಂದ್ರ ಧಾರವಾಡ ಕೇಂದ್ರದಿಂದ ಕಳೆದ 2 ವರ್ಷಗಳಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು.

**ಕರ್ನಾಟಕ ಕೌಶಲ್ಯಾಭಿವೃದ್ಧಿ ಕೇಂದ್ರ (ಸಿಡಾಕ್)**

| ವರ್ಷ | ಕಾರ್ಯಕ್ರಮಗಳು | ಅನುದಾನ (ರೂ. ಲಕ್ಷಗಳಲ್ಲಿ) | ಅಭ್ಯರ್ಥಿಗಳ ಸಂಖ್ಯೆ |
|---|---|---|---|
| 2020-21 | 1. ಆರು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ (20)<br>2. 30 ದಿನಗಳ ಕೌಶಲ್ಯ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ (55)<br>3. ಪರಿಶಿಷ್ಟಜಾತಿಯ ಅಭ್ಯರ್ಥಿಗಳಿಗೆ 30 ದಿನಗಳ ಕೌಶಲ್ಯ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ (5)<br>4. ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 30 ದಿನಗಳ ಕೌಶಲ್ಯ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ (2) | 170.00 | 2308 |
| 2021-22 | 1. ಒಂದು ದಿನದ ಉದ್ಯಮಶೀಲತಾ ಪ್ರೇರಣಾ ಶಿಬಿರ (60)<br>2. ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕೆ ಕಾರ್ಯಕ್ರಮ (60)<br>3. ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ (39)<br>4. ಪರಿಶಿಷ್ಟಜಾತಿಯ ಅಭ್ಯರ್ಥಿಗಳಿಗೆ 30 ದಿನಗಳ ವಿಷಯ/ವಲಯ ಆಧಾರಿತ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ (5)<br>5. ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 30 ದಿನಗಳ ವಿಷಯ/ವಲಯ ಆಧಾರಿತ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ (2) | 99.55 | 9773 |

| | |
|---|---|
| | **ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (NULM)**<br>ಡೇ-ಎನ್‌ಯುಎಲ್‌ಎಂ ಅಭಿಯಾನದಡಿ 2020-21 & 2021-22ನೇ ಸಾಲಿನಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಲಾಗಿರುತ್ತದೆ.<br><br>1) **ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ:**<br>ಸದರಿ ಉಪಘಟಕದಡಿ ಮಹಿಳಾ ಸ್ವ-ಸಹಾಯ ಸಂಘ, ಪ್ರದೇಶ ಮಟ್ಟದ ಒಕ್ಕೂಟಗಳ ರಚನೆ, ಸ್ವ-ಸಹಾಯ ಸಂಘಗಳಿಗೆ ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ, ಆವರ್ತಕ ನಿಧಿ ವಿತರಣೆ, ದಾಖಲಾತಿಗಳ ಪೂರೈಕೆ, ಸ್ವ-ಸಹಾಯ ಸಂಘಗಳ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಸೌಲಭ್ಯವನ್ನು ಕಲ್ಪಿಸುವ ಸಂಬಂಧ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಗಳ ಕಾರ್ಯಕ್ರಮಗಳನ್ನು ಆಯೋಜಿಸಲಾಗಿರುತ್ತದೆ.<br><br>ಸದರಿ ಉಪಘಟಕದಡಿ 2020-21ನೇ ಸಾಲಿನಲ್ಲಿ 1227 ಸ್ವ-ಸಹಾಯ ಸಂಘಗಳು ಮತ್ತು 28 ಒಕ್ಕೂಟಗಳು ಹಾಗೂ 2021-22ನೇ ಸಾಲಿನಲ್ಲಿ 2348 ಸ್ವ-ಸಹಾಯ ಸಂಘಗಳು ಮತ್ತು 99 ಒಕ್ಕೂಟಗಳು ಈ ಯೋಜನೆಯ ಪ್ರಯೋಜನವನ್ನು ಪಡೆದುಕೊಂಡಿರುತ್ತಾರೆ.<br><br>2) **ಸ್ವಯಂ ಉದ್ಯೋಗ ಕಾರ್ಯಕ್ರಮ:**<br><br>ಸದರಿ ಉಪಘಟಕದಡಿ ವೈಯಕ್ತಿಕ ಕಿರು ಉದ್ದಿಮೆಗೆ ರೂ.2.00 ಲಕ್ಷ, ಗುಂಪು ಕಿರು ಉದ್ದಿಮೆಗೆ ರೂ.10.00 ಲಕ್ಷ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ಗೆ ಸಂಬಂಧಿಸಿದಂತೆ ರೂ.1.00 ಲಕ್ಷ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. ಬ್ಯಾಂಕಿನಿಂದ ಸಾಲ ಮಂಜೂರಾತಿಯಾದ ಮೊತ್ತಕ್ಕೆ ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು ಹಾಗೂ ಸ್ವ-ಸಹಾಯ ಸಂಘಗಳು ನಿಯಮಿತವಾಗಿ ಸಾಲವನ್ನು ಮರು ಪಾವತಿಸಿದರೆ ಶೇ.3 ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ ನೀಡಲಾಗುವುದು ಹಾಗೂ ಉದ್ಯಮಶೀಲತಾ ತರಬೇತಿಯನ್ನು ನೀಡಲಾಗುವುದು.<br><br>• 2020-21ನೇ ಸಾಲಿನಲ್ಲಿ ವೈಯಕ್ತಿಕ ಕಿರು ಉದ್ದಿಮೆಯಡಿ 469 ಫಲಾನುಭವಿಗಳಿಗೆ, ಗುಂಪು ಕಿರು ಉದ್ದಿಮೆಯಡಿ 36 ಗುಂಪುಗಳಿಗೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ನಡಿ 204 ಗುಂಪುಗಳಿಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.<br><br>• 2021-22ನೇ ಸಾಲಿನಲ್ಲಿ ವೈಯಕ್ತಿಕ ಕಿರು ಉದ್ದಿಮೆಯಡಿ 1382 ಫಲಾನುಭವಿಗಳಿಗೆ ಗುಂಪು ಕಿರು ಉದ್ದಿಮೆಯಡಿ 150 ಗುಂಪುಗಳಿಗೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ನಡಿ 626 ಗುಂಪುಗಳಿಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.<br><br>3) **ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ:**<br>ಸದರಿ ಉಪಘಟಕದಡಿ ನಗರದ ನಿರುದ್ಯೋಗ ಯುವಕ / ಯುವತಿಯರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಿ, ಪ್ರಮಾಣೀಕರಣ ಮತ್ತು ಮೌಲ್ಯಮಾಪನವನ್ನು ಕೈಗೊಂಡು, ಕೇಂದ್ರ ಸರ್ಕಾರದ ಪ್ರಮಾಣ ಪತ್ರವನ್ನು ನೀಡಿ, ತರಬೇತಿಯನ್ನು ಪಡೆದುಕೊಂಡ ಶೇ.70 ರಷ್ಟು ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಅಥವಾ ವೇತನಾಧಾರಿತ ಉದ್ಯೋಗವನ್ನು ಕಲ್ಪಿಸಲಾಗುವುದು.<br>2020-21 & 2021-22ನೇ ಸಾಲಿನಲ್ಲಿ ಕ್ರಮವಾಗಿ 6647 & 13049 ಫಲಾನುಭವಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗಿರುತ್ತದೆ.<br>**4)ನಗರದ ವಸತಿ ರಹಿತರಿಗೆ ಆಶ್ರಯ:**<br>ಸದರಿ ಉಪಘಟಕದಡಿ ನಗರದ ವಸತಿ ರಹಿತರನ್ನು ರ್‍ಯಾಪಿಡ್ ಸಮೀಕ್ಷೆಯ ಮೂಲಕ ಗುರುತಿಸಿ ತಾತ್ಕಾಲಿಕವಾಗಿ ಆಶ್ರಯವನ್ನು ಕಲ್ಪಿಸಲಾಗುವುದು.<br><br>2020-21 & 2021-22ನೇ ಸಾಲಿನಲ್ಲಿ ಅನುಕ್ರಮವಾಗಿ 1840 & 2320 ವಸತಿ ರಹಿತರಿಗೆ ತಾತ್ಕಾಲಿಕವಾಗಿ ಆಶ್ರಯವನ್ನು ಕಲ್ಪಿಸಲಾಗಿರುತ್ತದೆ. |

<table>
<tr>
<td></td>
<td>
5)ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ:<br>
ಸದರಿ ಉಪಘಟಕದಡಿ ನಗರದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.<br>
2020-21 & 2021-22ನೇ ಸಾಲಿನಲ್ಲಿ ಕ್ರಮವಾಗಿ 25141 & 393 ಬೀದಿ ವ್ಯಾಪಾರಿಗಳನ್ನು ಗುರುತಿಸಿ 16534 & 1073 ಬೀದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ, 63576 & 30860 ಮಾರಾಟ ಪ್ರಮಾಣ ಪತ್ರವನ್ನು ವಿತರಿಸಲಾಗಿರುತ್ತದೆ. ಪಿಎಂ ಸ್ವ-ನಿಧಿ ಯೋಜನೆಯಡಿ ಒಟ್ಟು 242813 ಅರ್ಜಿಗಳು ಸ್ವೀಕೃತವಾಗಿದ್ದು, 175643 ಅರ್ಜಿಗಳಿಗೆ ಮಂಜೂರಾತಿ ನೀಡಿದ್ದು ಈ ಪೈಕಿ 175643 ಬೀದಿ ವ್ಯಾಪಾರಿಗಳಿಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಒದಗಿಸಲಾಗಿರುತ್ತದೆ.<br>
ಕಳೆದ 2 ವರ್ಷಗಳಲ್ಲಿ ಸರ್ಕಾರದಿಂದ ಡೇ-ಎನ್‌ಯುಎಲ್‌ಎಂ ಅಭಿಯಾನವನ್ನು ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.
<table>
<tr><th rowspan="2">ಕ್ರ ಸಂ</th><th rowspan="2">ವರ್ಷ</th><th colspan="3">ಬಿಡುಗಡೆಯಾದ ಮೊತ್ತ</th></tr>
<tr><th>ಕೇಂದ್ರದ ಪಾಲು</th><th>ರಾಜ್ಯದ ಪಾಲು</th><th>ಒಟ್ಟು</th></tr>
<tr><td>1</td><td>2020-21</td><td>3207.02</td><td>2138.01</td><td>5345.03</td></tr>
<tr><td>2</td><td>2021-22</td><td>0.00</td><td>0.00</td><td>0.00</td></tr>
</table>
</td>
</tr>
<tr>
<td>(ಇ) ಈಗಿನ ದಿನಮಾನಗಳಿಗೆ ಅನುಗುಣವಾಗಿ ಉದ್ಯಮಶೀಲತಾ ಗುಣಮಟ್ಟವನ್ನು ಹೆಚ್ಚಿಸಲು ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಪ್ರಾಧಿಕಾರ/ನಿಗಮದ ಪಾತ್ರವೇನು?</td>
<td>
ಉದ್ಯಮಶೀಲತಾ ಗುಣಗಳನ್ನು ಹೆಚ್ಚಿಸಲು ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್)ವು ಉದ್ಯಮಶೀಲತಾ ಪ್ರೇರಣಾ ಶಿಬಿರ ಹಾಗೂ ಉದ್ಯಮಶೀಲತಾ ತಿಳುವಳಿಕೆ ಕಾರ್ಯಕ್ರಮಗಳ ಮುಖಾಂತರ ಪ್ರೇರಣೆ, ತಿಳುವಳಿಕೆಯನ್ನು ಆಸಕ್ತರಲ್ಲಿ ಮೂಡಿಸಿ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳ ಮುಖಾಂತರ ಸಾಧನಾ ಪ್ರೇರಣಾ ತರಬೇತಿಯನ್ನು ನೀಡಿ ಉದ್ಯಮಶೀಲತೆಯ ಗುಣಗಳನ್ನು ಹೆಚ್ಚಿಸಿ ಸ್ವಯಂ ಉದ್ಯೋಗ ಆಕಾಂಕ್ಷಿಗಳನ್ನು ಪ್ರೋತ್ಸಾಹಿಸುತ್ತಿದೆ.<br>
ಅಲ್ಲದೇ, ಆಸಕ್ತರನ್ನು ತಲುಪಲು ಡಿಜಿಟಲ್ ಸೋಷಿಯಲ್ ಮಿಡಿಯಾಗಳ ಮೂಲಕ ಅವಶ್ಯಕ ಮಾಹಿತಿಯನ್ನು ನೀಡಲಾಗುತ್ತಿದೆ ಮತ್ತು ತರಬೇತಿ ಕಾರ್ಯಕ್ರಮಗಳಲ್ಲಿ ಈಗಿನ ದಿನಮಾನಗಳಿಗೆ ಬೇಕಾಗುವಂತಹ ಆನ್‌ಲೈನ್ ಮಾರುಕಟ್ಟೆ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.
</td>
</tr>
</table>

**ಸಂಖ್ಯೆ: ಕೌಉಜೀಇ 17 ಕೌಗುಪ್ರ 2022**

**(ಡಾ॥ ಸಿ.ಎನ್. ಅಶ್ವಥ್‌ನಾರಾಯಣ)**
**ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು**
**ತಂತ್ರಜ್ಞಾನ, ವಿದ್ಯುನ್ಮಾನ ಮತ್ತು**
**ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು**
**ಜೀವನೋಪಾಯ ಸಚಿವರು.**

## ಅನುಬಂಧ –1

### ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ರೂಪಿಸಿದ ಕಾರ್ಯಕ್ರಮಗಳ ವಿವರ :

- 2021–22 ನೇ ಸಾಲಿನಲ್ಲಿ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿನೆನಪಿಗಾಗಿ 15 ನೇ ಆಗಸ್ಟ್ 2021 ರ ಭಾಷಣದಲ್ಲಿ ಈಗಾಗಲೇ **ಅಮೃತ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು** ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಮೂಲಕ ಜಾರಿಗೊಳಿಸಲು ಆದೇಶಿಸಲಾಗಿದ್ದು, ಈ ಕಾರ್ಯಕ್ರಮದಡಿ ಒಟ್ಟಾರೆ 75000 ಅಭ್ಯರ್ಥಿಗಳಿಗೆ ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ನೀಡುವ ಗುರಿಯನ್ನು ಹೊಂದಲಾಗಿದೆ. ಪ್ರಸಕ್ತ 2021–22 ನೇ ಸಾಲಿನಲ್ಲಿ 38460 ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ, ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಉಚಿತ ಕೌಶಲ್ಯಾಧಾರಿತ ತರಬೇತಿ ನೀಡುವ ಗುರಿಯನ್ನು ಹೊಂದಲಾಗಿದ್ದು, ಈಗಾಗಲೇ 38460 ಅಭ್ಯರ್ಥಿಗಳಿಗೆ ತರಬೇತಿ ನೀಡಲು ಕಾರ್ಯಾದೇಶ ಹೊರಡಿಸಲಾಗಿದೆ. ಎಲ್ಲಾ ಅಭ್ಯರ್ಥಿಗಳಿಗೆ ತರಬೇತಿ ಕಾರ್ಯಕ್ರಮಗಳು ಪ್ರಾರಂಭವಾಗಿದ್ದು, ಮುಕ್ತಾಯಗೊಂಡಿರುತ್ತದೆ. 2022–23 ನೇ ಸಾಲಿಗೂ ಕೂಡ 36540 ಅಭ್ಯರ್ಥಿಗಳಿಗೆ ಅಮೃತ ಕೌಶಲ್ಯ ತರಬೇತಿ ಕಾರ್ಯಕ್ರಮದಡಿ ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ನೀಡುವ ಗುರಿ ಹೊಂದಲಾಗಿದೆ.
- **ಆರೋಗ್ಯ ವಲಯದ Crash Course ತರಬೇತಿ** : ಕೋವಿಡ್ – 19 ರ ಸಂಬಂಧ ಆರೋಗ್ಯ ವಲಯದಲ್ಲಿ ಅಗತ್ಯವಿರುವ ಕೌಶಲ್ಯಾಧಾರಿತ ಮಾನವ ಸಂಪನ್ಮೂಲ ದೊರಕಿಸಿಕೊಡಲು 6 ಜಾಬ್‌ರೋಲ್‌ಗಳಲ್ಲಿ Covid Crash Course ಗಳನ್ನು ಪ್ರಾರಂಭಿಸಲಾಗಿದೆ. ರಾಜ್ಯದ 8 ಜಿಲ್ಲೆಗಳಲ್ಲಿ ಈಗಗಲೇ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದ್ದು, 74 ತರಬೇತಿ ಸಂಸ್ಥೆಗಳ ಮೂಲಕ 15000 ಅಭ್ಯರ್ಥಿಗಳ ತರಬೇತಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಅದರಂತೆ 11408 ತರಬೇತಿದಾರರಿಗೆ ತರಬೇತಿ ಪ್ರಾರಂಭವಾಗಿರುತ್ತದೆ. ಈ ಮೂಲಕ ಸಂಭಾವ್ಯ ಕೊವೀಡ್ 3 ನೇ ಅಲೆಗೆ ಸಂಬಂಧಿಸಿದಂತೆ ಸಿಬ್ಬಂದಿಗಳ ಕೊರತೆಯನ್ನು ನಿವಾರಿಸಲು ಕ್ರಮವಹಿಸಲಾಗಿದೆ.
- **ಪೂರ್ವಕಲಿಕೆಯ ಗುರುತಿಸುವಿಕೆ Recognition of Prior Learning (RPL)** : ಈ ಕಾರ್ಯಕ್ರಮದಡಿ ಒಟ್ಟು 6000 ಅಭ್ಯರ್ಥಿಗಳಿಗೆ ತರಬೇತಿ ನೀಡುವ ಗುರಿಯನ್ನು ಹೊಂದಲಾಗಿದ್ದು, 5572 ಅಭ್ಯರ್ಥಿಗಳಿಗೆ ಈಗಾಗಲೇ ತರಬೇತಿ ಕಾರ್ಯವು ಪೂರ್ಣಗೊಂಡಿರುತ್ತದೆ.
- **ಸಂಕಲ್ಪ ಯೋಜನೆ** : ಸಂಕಲ್ಪ ಯೋಜನೆಯಡಿ 500 ಐಟಿಐ/ ಡಿಪ್ಲೋಮಾ/ ಪದವಿ ಉಪನ್ಯಾಸಕರಿಗೆ ಅಧುನಿಕ ಸಂಭೋಧನಾ ಕೌಶಲ್ಯ ಹಾಗೂ 21st Century Skills, Communicative English Skills ತರಬೇತಿ ನೀಡಲಾಗುತ್ತಿದೆ.
- **ಆಂಗ್ಲ ಭಾಷಾ ಪ್ರಯೋಗಾಲಯಗಳು** : ಪ್ರಯೋಗಾಲಯಗಳನ್ನು ಆಯ್ಕೆಯಾದ ಯಾದಗಿರಿ, ಕೊಪ್ಪಳ, ಚಿತ್ರದುರ್ಗ, ಚಾಮರಾಜನಗರ ಮತ್ತು ಮಂಗಳೂರು ಜಿಲ್ಲೆಗಳ ಜಿಟಿಟಿಸಿ ಮತ್ತು ಐಟಿಐ ನ ಐದು ಭಾಷಾ ಪ್ರಯೋಗಾಲಯಗಳನ್ನು ನಿರ್ಮಿಸಿ ಪ್ರತಿ ಪ್ರಯೋಗಾಲಯದಿಂದ 200 ಅಭ್ಯರ್ಥಿಗಳಂತೆ ಒಟ್ಟು 1000 ಅಭ್ಯರ್ಥಿಗಳಿಗೆ ತರಬೇತಿ ನೀಡಲು ಮತ್ತು ಭಾಷಾ ತರಬೇತಿಯನ್ನು ಒದಗಿಸಲು ಕಾರ್ಯಾದೇಶವನ್ನು ನೀಡಲಾಗಿದೆ. ಯೋಜನೆಯ ಅನುಷ್ಠಾನವು ಪ್ರಗತಿಯಲ್ಲಿದೆ. ಕೊಪ್ಪಳ, ಯಾದಗಿರಿ, ಚಿತ್ರದುರ್ಗ, ಚಾಮರಾಜನಗರ, ಮಂಗಳೂರು, ಬೆಂಗಳೂರು (ಮಲ್ಲೇಶ್ವರಂ), ಮಂಡ್ಯ ಜಿಲ್ಲೆಗಳಲ್ಲಿ ಲ್ಯಾಬ್‌ಗಳನ್ನು ಸ್ಥಾಪಿಸಲಾಗಿದ್ದು, ಇಂಗ್ಲಿಷ್ ಭಾಷೆಯ ತರಬೇತಿಯನ್ನು ಪ್ರಾರಂಭಿಸಲಾಗಿದೆ.
- **Domain Skills Training** : ಎರಡು ವಿಭಿನ್ನ ವಲಯಗಳಲ್ಲಿ 400 ತರಬೇತುದಾರರಿಗೆ ತರಬೇತಿ ನೀಡಲು ಟಿಒಟಿ ಡೊಮೈನ್ ಕೌಶಲ್ಯಗಳಿಗಾಗಿ ಜಿಟಿಟಿಸಿ ಮತ್ತು ಕೆಜಿಟಿಟಿಐ ಯಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಿದೆ. ರಾಜ್ಯದ ಜಿಲ್ಲೆಗಳಾದ್ಯಂತ ನಾಲ್ಕು ವಿಭಿನ್ನ ವಲಯಗಳಲ್ಲಿ 300 ತರಬೇತುದಾರರಿಗೆ ತರಬೇತಿ ನೀಡಲು ಜಿ.ಟಿ.ಟಿ.ಸಿ ಮತ್ತು ಕೆ.ಜಿ.ಟಿ.ಟಿ.ಐ ಸಂಸ್ಥೆಯವರಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.
- **Localization of Content** : ಕೌಶಲ್ಯ ತರಬೇತಿಯ ವಿವಿಧ ಜಾಬ್‌ರೋಲ್‌ಗಳ ಪಠ್ಯಕ್ರಮ ಆಂಗ್ಲಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಗೊಳಿಸಲು ಕ್ರಮವಹಿಸಲಾಗಿದ್ದು, ಈಗಾಗಲೇ 16 ಜಾಬ್‌ರೋಲ್‌ಗಳ ಪಠ್ಯಕ್ರಮಗಳನ್ನು ಮತ್ತು ಜಿಲ್ಲಾ ಕೌಶಲ್ಯ ಅಭಿವೃದ್ಧಿ ಯೋಜನೆಯ 4 ಹಂತದ ಮಾರ್ಗಸೂಚಿಗಳನ್ನು ಭಾಷಾಂತರಗೊಳಿಸಿದ್ದು, ಇನ್ನು 45 ಜಾಬ್‌ರೋಲ್‌ಗಳ ಪಠ್ಯಕ್ರಮಗಳ ಭಾಷಾಂತರ ಕಾರ್ಯ ಪ್ರಗತಿಯಲ್ಲಿರುತ್ತದೆ.

- **<u>ಕಿರು ಉದ್ಯಮಶೀಲತೆ ಕಾರ್ಯಕ್ರಮ (NEP)</u>** : ಹೆಸರೇ ಸೂಚಿಸುವಂತೆ ತಳಮಟ್ಟದ ಕಿರು ಉದ್ಯಮಿಗಳಿಗೆ ಕೌಶಲ್ಯಗಳನ್ನು ಕಲಿಯಲು ಮತ್ತು ವ್ಯವಹಾರ ಜ್ಞಾನವನ್ನು ಪಡೆಯಲು ಸಹಾಯ ಮಾಡುವ ಉದ್ಯಮಶೀಲತೆಯ ಕಾರ್ಯಕ್ರಮವಾಗಿದ್ದು, 200 ತಳ ಮಟ್ಟದ ಕಿರು ಉದ್ಯಮಿಗಳನ್ನು ಪ್ರೋತ್ಸಾಹಿಸುವ ಹಾಗೂ ಮಹಿಳೆಯರಿಗೆ ವಿಶೇಷ ಗಮನವನ್ನು ನೀಡುವ ಮೂಲಕ ತರಬೇತಿ ಮತ್ತು ಸೌಲಭ್ಯ ವನ್ನು ಒದಗಿಸುವ ಮೂಲಕ ಉದ್ಯಮಶೀಲತೆಯ ಪ್ರತಿಯೊಂದು ಹಂದದಲ್ಲೂ ಇರುವ ಹಲವಾರು ಸವಾಲುಗಳನ್ನು ಎದುರಿಸಲು ಸಹಾಯ ಮಾಡುವುದಾಗಿದೆ.
- **<u>Skill Connect (ಕೌಶಲ್ಯ ಸಂಪರ್ಕ) ಪೋರ್ಟಲ್</u>** : ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಆಸಕ್ತ ಉದ್ಯೋಗದಾತರು ಹಾಗೂ ಉದ್ಯೋಗಾಂಕ್ಷಿಗಳನ್ನು ಒಂದೇ ವೇದಿಕೆಯಡಿ ತರಲು Skill Connect (ಕೌಶಲ್ಯ ಸಂಪರ್ಕ) ಪೋರ್ಟಲ್ ಅನ್ನು ಸೃಷ್ಟಿಸಿದ್ದು, ಅದನ್ನು ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 29.06.2020 ರಲ್ಲಿ ಉದ್ಘಾಟಿಸಿರುತ್ತಾರೆ.
- **<u>Convergence</u>** : ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ವಿವಿಧ ಇಲಾಖೆಗಳ ಸಹಭಾಗಿತ್ವದೊಂದಿಗೆ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ.

  1) **ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ** : T A P – Talent Acceleration Programme ಮೂಲಕ 2000 ಅಂತಿಮ ವರ್ಷ ಬಿ.ಇ / ಬಿಎಸ್‌ಸಿ/ ಬಿ.ಸಿ.ಎ ವಿದ್ಯಾರ್ಥಿಗಳಿಗೆ ಫ್ಯೂಚರ್ ಸ್ಕಿಲ್ ನಲ್ಲಿ ತರಬೇತಿ ನೀಡಿ ಉದ್ಯೋಗ ಕಲ್ಪಸುವ ಕ್ರಮವಹಿಸಲಾಗಿದೆ.

  2) **ಪಂಚಾಯತ್ ರಾಜ್ ಇಲಾಖೆ** : ಸ್ವ ಸಹಾಯ ಸಂಘಗಳ ಮಹಿಳೆಯರಿಗೆ ಘನತ್ಯಾಜ್ಯ ನಿರ್ವಹಣೆಯ ತರಬೇತಿ ಹಾಗೂ ವಾಹನಾ ಚಾಲನಾ ತರಬೇತಿ

  3) **ಪೋಲೀಸ್ ಇಲಾಖೆ** : ಕಾರಗೃಹ ವಾಸಿಗಳಿಗೆ ಸ್ವಯಂ ಉದ್ಯೋಗ ಹಾಗೂ ಸ್ವಾವಲಂಬನಾ ತರಬೇತಿ

  4) **ಕೃಷಿ ಇಲಾಖೆ** : ಕೃಷಿ ವಿಜ್ಞಾನ ಕೇಂದ್ರಗಳನ್ನು ತರಬೇತಿ ಪಾಲುದಾರರನ್ನಾಗಿ ಮಾಡಿ ಕೃಷಿ ತರಬೇತಿ ಸೇರಿ ಸ್ವಯಂ ಉದ್ಯೋಗಗಳಲ್ಲಿ ತರಬೇತಿ (organic grower, Agricultural mechanic, seeds grower)

  5) **ಉನ್ನತ ಶಿಕ್ಷಣ ಇಲಾಖೆ** : Vishweshwariah Technical University & Karnataka State Open University ಸಂಸ್ಥೆಗಳು ತರಬೇತಿ ಪಾಲುದಾರರಾಗಿ ಫ್ಯೂಚರ್ ಸ್ಕಿಲ್ ನಲ್ಲಿ ತರಬೇತಿ ನೀಡಲಾಗುತ್ತಿದೆ.
- **<u>Industry Connect (Demand Drives Training)</u>** : Industry Connect ಕಾರ್ಯಕ್ರಮದ ಮೂಲಕ Industry Linkage Cell ಸ್ಥಾಪಿಸಲಾಗಿದ್ದು, ಕೈಗಾರಿಕೆಗಳನ್ನು ತರಬೇತಿ ಪಾಲುದಾರರನ್ನಗಿ ಮಾಡಿ ಅವರದೇ ತರಬೇತಿ ಕೇಂದ್ರಗಳ ಮೂಲಕ ಔದ್ಯೋಗಿಕ ಬೇಡಿಕೆಗಳ ಅನುಸಾರವಾಗಿ ಉದ್ಯೋಗ ಒದಗಿಸಲಾಗುತ್ತಿದೆ. (Flipkart, Sansera Technologies, kaynes technologies, Wipro GE, ELCIA, Mysore Industrial Association)
- Skill Gap Study ನಡೆಸಲು GRAAM ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಈ ಸಂಬಂಧ ವಿಸ್ತೃತ ವರದಿಯು ಸಲ್ಲಿಕೆಯಾಗಿರುತ್ತದೆ.
- **<u>ಸ್ಕಿಲ್ ಹಬ್ (Skill Hub)</u>** : ರಾಜ್ಯದ ಯುವಕ–ಯುವತಿಯರಿಗೆ ಒಂದೇ ಸೂರಿನಡಿ ಉದ್ಯೋಗಾವಕಾಶ, ಕೌಶಲ್ಯ ತರಬೇತಿ ಮತ್ತು ಉದ್ಯಮಶೀಲತೆಯ ತರಬೇತಿ ನೀಡಲು ರಾಮನಗರ ಜಿಲ್ಲೆಯಲ್ಲಿ ಪೈಲಟ್ ಆಧಾರದ ಮೇರೆಗೆ ಸ್ಕಿಲ್ ಹಬ್ (Skill Hub) ಅನ್ನು ದಿನಾಂಕ: 03.01.2022 ರಂದು ಸನ್ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟಿಸಿರುತ್ತಾರೆ.
- **<u>Skill on Wheels</u>** : ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ Skill on Wheels ಯೋಜನೆಯನ್ನು ಪೈಲಟ್ ಆಧಾರದ ಮೇರೆಗೆ ಪ್ರಾರಂಭಿಸಲಾಗುತ್ತಿದ್ದು, ದೂರದ ಹಳ್ಳಿಗಾಡಿನ ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಯುವ ಜನತೆಗೆ ಹಾಗೂ ಇತರೆ ಪ್ರದೇಶಗಳಲ್ಲಿನ ಯುವ ಜನತೆಗೆ ಕೌಶಲ್ಯಾಧಾರಿತ ತರಬೇತಿಯಲ್ಲಿ ಸ್ಥಳದಲ್ಲಿಯೇ ನೀಡುವ ಮಹಾತ್ವಾಂಕ್ಷೆಯನ್ನು ಹೊಂದಿರುತ್ತದೆ.